# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**OS 67/2017**

**DW 3**

| | | |
|---|---|---|
| ಸಾಕ್ಷಿಯ ಹೆಸರು | ಃ | ಸನತ್ ಕುಮಾರ್ ಜೈನ್ |
| ತಂದೆ ಹೆಸರು | ಃ | ಭೋಜರಾಜ ಹೆಗ್ಡೆ |
| ಪ್ರಾಯ | ಃ | **64 ವರ್ಷ** |
| ಉದ್ಯೋಗ | ಃ | ನಿವೃತ್ತ ಬ್ಯಾಂಕ್ ಉದ್ಯೋಗ |
| ವಾಸ | ಃ | ಸಾಣೂರು. |

ದಿನಾಂಕ **: 22.01.2026** ರಂದು ಡಿಡಬ್ಲ್ಯೂ - 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಶ್ರೀ ಎಂ.ಕೆ.ವಿ.ಟಿ. 1 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಈ ಕೇಸಿನ ಸಾಕ್ಷಿದಾರ. ನ್ಯಾಯಾಲಯದಿಂದ ಸಮನ್ಸ ಜಾರಿಯಾದ ಮೇರೆಗೆ ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ಪಾನ್

**OS 67/2027**
**DW 3**

ಕಾರ್ಡ್ ನ ನೋಟರೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ - 20 ಎಂದು ಗುರುತಿಸಲಾಯಿತು. (ಮೂಲ ಪ್ರತಿಯನ್ನು ಪರಿಶೀಲಿಸಿ ಹಿಂತಿರುಗಿಸಲಾಯಿತು). ನನ್ನ ತಂದೆಯ ಹೆಸರು ಭೋಜರಾಜ ಹೆಗ್ಡೆ , ಅವರ ತಂದೆಯ ಹೆಸರು ಅಪ್ಪು ಕೇಲ. ನನ್ನ ತಂದೆಯವರ ಸೋದರ ಮಾವನ ಹೆಸರು ಅಪ್ಪು ಹೆಗ್ಡೆ. ನನ್ನ ತಂದೆ ಈದು ಗ್ರಾಮದ ಹೊಸಮನೆಯ ನಿವಾಸಿ.

ನನ್ನ ತಂದೆ ವಿದ್ಯಾವಂತರಾದ್ದರು. ಅವರು ಮೊದಲು ಕೃಷಿ ಮಾಡುತ್ತಿದ್ದು ನಂತರ ಹೋಟೇಲ್ ಉದ್ಯಮವನ್ನು ಸಾಣೂರು ಗ್ರಾಮದ ಮುರತಂಗಡಿಯಲ್ಲಿ ಮಾಡುತ್ತಿದ್ದರು.

ನನ್ನ ತಂದೆಯ ಸಹಿಯ ಪರಿಚಯವಿದೆ. ಅವರ ಸಹಿಗಳನ್ನು ಗುರುತಿಸಬಹುದು. ಈಗ ನನಗೆ ತೋರಿಸಿದ ನಿಡಿ - 5 ರಲ್ಲಿ ನನ್ನ ತಂದೆಯ ಸಹಿಯನ್ನು ಗುರುತಿಸಿದ್ದು, ಅವರ ಸಹಿಯನ್ನು ವಾದಿ ಮತ್ತು ಪ್ರತಿವಾದಿ 2 ರಿಂದ 4 ರವರ ತಕರಾರಿಗೆ ಒಳಪಟ್ಟು ನಿಡಿ - 5(ಸಿ) ಎಂದು ಗುರುತಿಸಲಾಯಿತು.

**OS 67/2027**
**DW 3**

<u>ಪಾಟೀ ಸವಾಲುಃ</u>  ವಾದಿ ಮತ್ತು 2 ರಿಂದ 4ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ  ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.